# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ

E-mail : kannadapostnews@gmail.com / ಕನ್ನಡ post

Price: ₹1

Vol.No.02 | Issue. 68 | Pages. 2 | Date: 11-02-2026, WEDNESDAY

RNI NO: KARKAN/2024/89601

Kannada Daily

ಸಂಪುಟ : 02 – ಸಂಚಿಕೆ : 68 – ಪುಟಗಳು : 2 11-02-2026 ಬುಧವಾರ

Ph: 8762954248

ದರ : ₹1

# ಮಹನೀಯರ ಜಯಂತಿಗೆ 2 ಲಕ್ಷ ರೂ. ನೆರವು

## ಶಾಸಕ ಶಿವಲಿಂಗೇಗೌಡ ಘೋಷಣೆ | ಹಿರಿಯರ ತತ್ವಾದರ್ಶ ಪಾಲಿಸಲು ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ತಾಲೂಕು ಆಡಳಿತದ ವತಿಯಿಂದ ಆಯೋಜಿಸುವ ಮಹನೀಯರ ಜಯಂತಿ ಆಚರಣೆಗೆ ವೈಯಕ್ತಿಕವಾಗಿ 2 ಲಕ್ಷ ರೂ. ನೀಡುತ್ತೇನೆಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಘೋಷಿಸಿದರು.

ತಾಲೂಕು ಆಡಳಿತ ಹಾಗೂ ತಾಲೂಕು ಗಂಗಾಮತ ಸಮಾಜದ ಸಂಯುಕ್ತ ಆಶ್ರಯದಲ್ಲಿ ಗಂಗಾ ಪರಮೇಶ್ವರಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ನಿಜ ಶರಣ ಅಂಬಿಗರ ಚೌಡಯ್ಯ ಜಯಂತಿಯಲ್ಲಿ ಮಾತನಾಡಿದ ಅವರು, ಗಂಗಾಮತ ಸಮಾಜವು ಸನಾತನ ಸಂಸ್ಕೃತಿಯ ಭಾಗವಾಗಿದೆ. ಯುಗ ಯುಗಾಂತರಗಳ ನಂಟು ಹೊಂದಿರುವ ಸಮಾಜದಲ್ಲಿ ಭೀಷ್ಮ ಅಂಬಿಗರ ಚೌಡಯ್ಯನಂತಹ ಮಹನೀಯರು ಜನಿಸಿ ಗಂಗಾಮತ ಸಮಾಜವನ್ನು ಉದ್ಧರಿಸಿದ್ದಾರೆ ಎಂದು ತಮ್ಮ ನುಡಿ ನಮನ ಸಲ್ಲಿಸಿದರು.

ಈ ಹಿಂದೆ ನಾನೇ ನಿರ್ಮಿಸಿ ಕೊಟ್ಟಿರುವ ಗಂಗಾ ಪರಮೇಶ್ವರಿ ಸಮುದಾಯ ಭವನದ ನವೀಕರಣದ ಕಾಮಗಾರಿಗೆ ಮತ್ತೆ 25 ಲಕ್ಷ ರೂ. ಅನುದಾನ ನೀಡುವುದರ ಜೊತೆಗೆ ಗಂಗಾ ಪರಮೇಶ್ವರಿ ಸಹಕಾರಿ ಸಂಘಕ್ಕೆ 5 ಲಕ್ಷ ರೂ. ಪ್ರೋತ್ಸಾಹ ಧನ ನೀಡುವುದಾಗಿ ಘೋಷಿಸಿದರು.

ನಗರಸಭೆ ನಿಕಟಪೂರ್ವ ಅಧ್ಯಕ್ಷ ಎಂ.ಸಮೀವುಲ್ಲಾ ಮಾತನಾಡಿ, ಜಾತಿ ಮತವಿಲ್ಲದೆ ಎಲ್ಲರ ಒಡಗೂಡಿ ಅದರಲ್ಲೂ ವಿಶೇಷವಾಗಿ ಸಣ್ಣಪುಟ್ಟ ಸಮಾಜಗಳನ್ನ ಗುರುತಿಸಿ ಆ ಸಮಾಜಗಳ ಮುಖಂಡರು, ರಾಜಕೀಯವಾಗಿ ಬೆಳೆಸುವ ಜೊತೆಗೆ ಸಮಾಜದ ಸಂಘಟನೆಗೆ ಅನುವಾಗುವ ರೀತಿಯಲ್ಲಿ ಸುಸಜ್ಜಿತ ಸಮುದಾಯ ಭವನಗಳನ್ನು ನಿರ್ಮಿಸಿ ಕೊಡುವ ಮೂಲಕ ಸಣ್ಣಪುಟ್ಟ ಸಮಾಜಗಳ ಸಂಘಟನೆಗೆ ಶಾಸಕರು ನೀಡುತ್ತಿರುವ ಕೊಡುಗೆ ನಮ್ಮೆಲ್ಲರಿಗೂ ಆದರ್ಶವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕು ಗಂಗಾಮತ ಸಮಾಜದ ಅಧ್ಯಕ್ಷ ಡಿ.ಲಕ್ಷ್ಮಣ್ ಮಾತನಾಡಿ, ತಾಲೂಕಿನಲ್ಲಿ ಸಣ್ಣ ಸಮಾಜವಾಗಿರುವ ನಮ್ಮ ಸಮಾಜವನ್ನು ಅಪ್ಪಿಕೊಂಡು ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿ ಸಮಾಜದ ಸಂಘಟನೆಗೆ ಸಹಕರಿಸುತ್ತಾ ಬಂದಿರುವ ಶಾಸಕರ ಕೊಡುಗೆ ಅಪಾರವಾಗಿದೆ.

ಅದೇ ರೀತಿ ಮುಂದೆಯೂ ಸಹ ಶಾಸಕರ ಮಾರ್ಗದರ್ಶನದಲ್ಲಿ ನಾವು ಮತ್ತಷ್ಟು ಸಂಘಟಿತರಾಗೋಣ ಎಂದು ಸಮಾಜದ ಬಂಧುಗಳಿಗೆ ಕರೆ ನೀಡಿದರು.

ತಹಸೀಲ್ದಾರ್ ಸಂತೋಷ್ ಕುಮಾರ್ ಮಾತನಾಡಿ, ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಸಮಿತಿ ಅಧ್ಯಕ್ಷ ಧರ್ಮಶೇಖರ್ ಮಾತನಾಡಿದರು. ಸಮಾರಂಭದಲ್ಲಿ ಗಂಗಾಮತ ಸಮಾಜದ 80 ವರ್ಷ ಮೇಲ್ಪಟ್ಟ ಹಿರಿಯ ಚೇತನಗಳಿಗೆ ಮತ್ತು ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿದ್ದು ವಿಶೇಷವಾಗಿತ್ತು.

ವೇದಿಕೆಯಲ್ಲಿ ಗಂಗಾಮತ ಸಮಾಜದ ಉಪಾಧ್ಯಕ್ಷರಾದ ರವಿಶಂಕರ್, ಸತೀಶ್, ಮುಖಂಡರಾದ ಪ್ರಭಾಕರ್, ಜಾಜೂರು ಸಿದ್ದೇಶ್, ಜಾವಗಲ್ ಪ್ರಸನ್ನ, ಶಾಸಕರ ಅಂಗರಕ್ಷಕ ರಾಮು, ದಿನೇಶ್, ಸುಭಾಷ್ ಇತರರಿದ್ದರು.

# ನಡೆ-ನುಡಿ ವ್ಯಕ್ತಿಯ ಶ್ರೇಷ್ಠತೆ: ಮಂಜಯ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಡೆ ಮತ್ತು ನುಡಿ ಎಂಬುದು ವ್ಯಕ್ತಿಯ ಶೇಷ್ಠತೆಯಾಗಿದೆ, ಕಾಯಕದಿಂದ ಮಾತ್ರ ಮಾರ್ಗ ಮುಕ್ತಿ ಸಾಧ್ಯವೆಂದು ಕಾಯಕ ಶರಣರು ವಚನಗಳ ಮೂಲಕ ಸಮಾಜಕ್ಕೆ 12ನೇ ಶತಮಾನದಲ್ಲಿ ಸಾರಿದ್ದಾರೆ. ವಚನಗಳ ಮಹತ್ವವನ್ನು ಅರಿಯಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಾಸನಾಂಬ ಕಲಾಕ್ಷೇತ್ರದಲ್ಲಿ ಕಾಯಕ ಶರಣರ ಜಯಂತಿ ಉದ್ಘಾಟಿಸಿ ಮಾತನಾಡಿ, ಬಸವಣ್ಣನವರು ಅನುಭವ ಮಂಟಪದಲ್ಲಿ ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಮಾದಾರ ಧೂಳಯ್ಯ, ಸಮಗಾರ ಹರಳಯ್ಯ ಇನ್ನೂ ಹಲವಾರು ಶರಣು ಅನುಯಾಯಿಗಳಾಗಿದ್ದರು. ತಮ್ಮ ಕಾಯಕವೇ ಶ್ರೇಷ್ಟ ಎಂಬುದನ್ನು ವಚನಗಳ ತಿಳಿಸುವ ಕೆಲಸ ಮಾಡಿದ್ದಾರೆ ಎಂದರು.

12ನೇ ಶತಮಾನದ ಜ್ಞಾನ ದಾಸೋಹವನ್ನು ಪ್ರಾರಂಭವಾಯಿತು. ಶರಣದ ವಚನಗಳ ಆದರ್ಶವನ್ನು ಯುವ ಪೀಳಿಗೆ ಪಾಲಿಸಿಬೇಕು, ಕಾಯಕ ಕನಿಷ್ಠವಲ್ಲ ಮಾಡುವ ಕೆಲಸದಿಂದ ಮಹತ್ವ ತಿಳಿಯುತ್ತದೆ.

ಭೂಮಿಯ ಮೇಲೆ ಇರುವ ಪ್ರತಿಯೊಂದು ಜೀವಿಯು ಹುಟ್ಟಿದಾಗ ವಿಶ್ವ ಮಾನವವಾಗಿ ಜನಿಸಿಸುತ್ತಾರೆ ಎಂದರು.

ಸಮಾಜದಲ್ಲಿ ಜಾತಿ ಧರ್ಮ ತಾರತಮ್ಯ, ಮೇಲು ಕೀಳು ತಾರತಮ್ಯ ನಡುವೆಯೂ ಕೂಡ ಸಮಾನತೆಯನ್ನು ಕಾಣಬಹುದಾಗಿದೆ. ಶರಣರು ತಮ್ಮ ಕಾಯಕವನ್ನು ಮಾಡುವ ಸಂಧರ್ಭದಲ್ಲಿ ನೀವು ಮಾಡುವ ಕಾಯಕವೇ ಶ್ರೇಷ್ಠ ವಿನಃ ಜಾತಿ ಅಲ್ಲ ಎಂದು ಹೇಳುವ ಮೂಲಕ ಅನುಭವ ಮಂಟಪವನ್ನು ಕಟ್ಟಲಾಗಿದೆ ಎಂದು ತಿಳಿಸಿದರು.

ಹುಟ್ಟಿಗೆ ಯಾವುದೇ ಜಾತಿ ಇರುವುದಿಲ್ಲಸಮಾಜದಲ್ಲಿ ಯಾವುದೇ ವೃತ್ತಿಯಲ್ಲಿ ಮೇಲು ಕೀಳು ಎಂಬುದು ಇರಬಾರದು ಎಲ್ಲಾ ವೃತ್ತಿಯನ್ನು ಗೌರವಿಸಬೇಕು. ಕಾಯಕ ಶರಣ ವಚನಗಳಲ್ಲಿನ ಮಹತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಹೆಚ್ .ಪಿ.ತಾರಾನಾಥ್, ಹಿರಿಯ ಕಲಾವಿದ ಗ್ಯಾರಂಟಿ ರಾಮಣ್ಣ, ಚೇತನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಹೇಮಾವತಿ ಕಾರ್ಖಾನೆ ಹಂಗಾಮಿ ಅಧ್ಯಕ್ಷ ಕೃಷ್ಣೇಗೌಡ ನಿಧನ

ಚನ್ನರಾಯಪಟ್ಟಣ: ತಾಲ್ಲೂಕಿನ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಹಂಗಾಮಿ ಅಧ್ಯಕ್ಷ ಬಿ.ಜೆ.ಕೃಷ್ಣೇಗೌಡ (69) ಮಂಗಳವಾರ ನಿಧನರಾದರು.

ಸುಮಾರು 10 ವರ್ಷಗಳ ಕಾಲ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ನಿರ್ದೇಶಕರಾಗಿ ಮತ್ತು ಉಪಾಧ್ಯಕ್ಷರಾಗಿ ನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಜೊತೆಗೆ ಬರಗೂರು ಗ್ರಾಮ ಪಂಚಾಯಿತಿಯಲ್ಲಿ ಸದಸ್ಯ ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೃತರಿಗೆ ಪುತ್ರ ಮತ್ತು ಪುತ್ರಿ ಇದ್ದಾರೆ. ಬರಗೂರು ಹ್ಯಾಂಡ್ ಪೋಸ್ಟ್ ಸಮೀಪದ ತೋಟದಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಲಿದೆ.

# ಅಪಘಾತದಲ್ಲಿ ವ್ಯಕ್ತಿ ಸಾವು

ಹಾಸನ: ಮಹೇಂದ್ರ ಬುಲೊರೋ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಹಾಲುವಾಗಿಲು ಸಮೀಪ ನಡೆದಿದೆ.

ವಿದ್ಯಾ ನಗರದ ಗಿಡ್ಡೇಗೌಡ (59) ಮೃತರು. ಆಲೂರು ತಾಲೂಕು ಪಾಳ್ಯ ಹೋಬಳಿ ಚಿಗಳೂರು ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಬುಲೊರೋ ಚಾಲಕ ಡಿಕ್ಕಿ ಮಾಡಿದ್ದಾನೆ. ಗಂಭೀರ ಗಾಯಗೊಂಡಿದ್ದ ಅವರನ್ನು ಹಿಮ್ಸ್‌ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪ್ರಮಾಣ ಪತ್ರ

ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಡಿ. ಕಾಳೇನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ನಂಜೇಗೌಡ ರವರ ಪುತ್ರ ಮಂಜುನಾಥ ಕೆ.ಎನ್., ವಯಸ್ಸು 55 ವರ್ಷ, ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ,

ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ನಿವಾಸಿಯಾಗಿರುತ್ತೇನೆ. ನಾನು ಎ.ಯು. ಸ್ಮಾಲ್ ಫೈನಾನ್ಸ್ ಬ್ಯಾಂಕ್, ಕೆ.ಆರ್. ಪೇಟೆ ಶಾಖೆಯಲ್ಲಿ ಸಾಲವನ್ನು ಪಡೆದಿರುತ್ತೇನೆ. ಬ್ಯಾಂಕ್ ದಾಖಲಾತಿಗಾಗಿ ನಮ್ಮ ಕುಟುಂಬದ ವಂಶವೃಕ್ಷವನ್ನು ಸಲ್ಲಿಸಿದ್ದೇನೆ.

ನಮ್ಮ ಕುಟುಂಬದಲ್ಲಿ ಕೆಳಕಂಡ ಸದಸ್ಯರು ಮಾತ್ರ ಇರುತ್ತಾರೆ:

ವಂಶವೃಕ್ಷ:

1. ನಂಜೇಗೌಡ (ಪೌತಿ)
2. ಪದ್ಮಮ್ಮ (ಪೌತಿ)
3. ಮಂಜುನಾಥ ಕೆ.ಎನ್. (55 ವರ್ಷ)
4. ಬಿ.ಎನ್. ಶೋಭಾ (44 ವರ್ಷ)
5. ಚಂದನ್ ಕೆ.ಎಂ. (24 ವರ್ಷ)
6. ವಿಭಾಶ್ರೀ ಕೆ.ಎಂ. (23 ವರ್ಷ)

ಮೇಲ್ಕಂಡ ಸದಸ್ಯರೇ ನಮ್ಮ ಕುಟುಂಬದ ಸಂಪೂರ್ಣ ಸದಸ್ಯರು ಆಗಿರುತ್ತಾರೆ. ನಮ್ಮ ಕುಟುಂಬದ ವಂಶವೃಕ್ಷದ ಬಗ್ಗೆ ಭವಿಷ್ಯದಲ್ಲಿ ಯಾವುದೇ ತಂಟೆತಕಾರಾರು ಉದ್ಭವಿಸಿದಲ್ಲಿ, ಅದನ್ನು ನಾನು ಸ್ವತಃ ಹೊಣೆ ಹೊತ್ತು ಬಗೆಹರಿಸಿಕೊಳ್ಳುತ್ತೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

ಮೇಲೆ ಹೇಳಿರುವ ಎಲ್ಲಾ ಅಂಶಗಳು ಸತ್ಯ ಮತ್ತು ನಿಖರವಾಗಿರುತ್ತದೆ ಎಂದು ನಾನು ಪ್ರಮಾಣೀಕರಿಸುತ್ತೇನೆ.

ಸ್ಥಳ: ಕೆ.ಆರ್. ಪೇಟೆ (ಪ್ರಮಾಣೀಕರಿಸುವವರು)
ದಿನಾಂಕ: 10-02-2026 ಮಂಜುನಾಥ ಕೆ.ಎನ್.

**ನೋಟರಿ ದೃಢೀಕರಣ**

ಈ ಪ್ರಮಾಣ ಪತ್ರವು 10-02-2026 ರಂದು ನನ್ನ ಮುಂದೆ ಓದಿಕೊಡಲ್ಪಟ್ಟು ದೃಢೀಕರಿಸಲಾಗಿದೆ.

ನೋಟರಿ
ರಾಣಿ ಕೆ.ಎಲ್., **B.A.L., LL.B..., .**
ರಿಜಿ. ನಂ: /37/2019(1)
ಮಾನ್ಯತೆ ಅವಧಿ: 22-06-2027
ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ
ಕರ್ನಾಟಕ ಸರ್ಕಾರ

# ವಕೀಲ ದೇವರಾಜೇಗೌಡರ ಆರೋಪಗಳೆಲ್ಲ ಸುಳ್ಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ವಕೀಲ ದೇವರಾಜೇಗೌಡ ಅವರು ಕಾಂಗ್ರೆಸ್ ಮುಖಂಡ ಹೆಚ್. ಕೆ. ಮಹೇಶ್ ವಿರುದ್ಧ ಮಾಡಿರುವ ಆರೋಪಗಳು ಸಂಪೂರ್ಣ ಸುಳ್ಳು ಮತ್ತು ಆಧಾರ ರಹಿತವಾಗಿವೆ.

ಎಂದು ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ಮಾಧ್ಯಮ ವಿಭಾಗ ಜಿಲ್ಲಾಧ್ಯಕ್ಷ ಹೆಚ್.ಆರ್. ವಿನೋದ್ ಕುಮಾರ್ ತಿರುಗೇಟು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಮಹೇಶ್ ಅವರು ನಗರಸಭೆ ಸದಸ್ಯರಾಗಿದ್ದ ಸಂದರ್ಭದಲ್ಲಿ ಅಕ್ರಮ ಆಸ್ತಿಗಳಿಕೆ ಮಾಡಿದ್ದಾರೆ ಎಂದು ಆರೋಪಿಸಿರುವುದು ಸುಳ್ಳು, 2004 ರಲ್ಲಿ 1

ಅಡಿಗೆ 100 ರೂ.ನಂತೆ ನೀಡಿ ನಿವೇಶನವನ್ನು ಕಾನೂನು ಬದ್ಧವಾಗಿ ಖರೀದಿಸಿದ್ದರು. ನಂತರ ಬ್ಯಾಂಕ್ ಸಾಲ ಪಡೆದು ಸ್ವಂತ ದುಡಿಮೆಯಿಂದ ಮನೆ ನಿರ್ಮಿಸಿಕೊಂಡಿದ್ದಾರೆ. ಇದನ್ನು ಹೊರತುಪಡಿಸಿ ಅವರು ಬೇರೆ ಯಾವುದೇ ಅಕ್ರಮ ಆಸ್ತಿ ಹೊಂದಿಲ್ಲ. ತಾಕತ್ತಿದ್ದರೆ ಮಹೇಶ್ ಅವರ ಅಕ್ರಮಗಳ ಬಗ್ಗೆ ದಾಖಲೆ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದರು.

ದೇವರಾಜೇಗೌಡ ಒಬ್ಬ ಆರ್‌ಟಿಐ ಕಾರ್ಯಕರ್ತ, ಬ್ಲಾಕ್ ಮೇಲರ್, ಆರ್‌ಟಿಐ ಅಧಿಕಾರಿಗಳ ಮೇಲೆ ಒತ್ತಡ ತಂದು ಸುದ್ದಿಗೋಷ್ಠಿ ನಡೆಸುವುದು, ಅವರಿಂದ ಹಣ ಪಡೆಯುವುದು ರೂಢಿಯಾಗಿದೆ ಎಂದು ಆರೋಪಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ 80 ಕೋಟಿ ರೂ. ಆಸ್ತಿ ಘೋಷಣೆ ಮಾಡಿಕೊಂಡರು. ಅವರಿಗೆ ಇಷ್ಟೊಂದು ಹಣ ಎಲ್ಲಿಂದ ಬಂತು ಎಂದು ಪ್ರಶ್ನಿಸಿದರು. ಮಹೇಶ್ ವಿರುದ್ಧ ಮಾಡಿರುವ ಆರೋಪ ಸಾಬೀತು ಮಾಡದೇ ಇದ್ದರೆ ಬಹಿರಂಗ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ಅಗಿಲೆ ಗುರು ಮಾತನಾಡಿ, ಹಾಸನದಲ್ಲಿ ಹಿಂದ ಪೆನ್‌ಡ್ರೈವ್ ಹಂಚಿದ್ದು ಯಾರು ಎಂಬುದು ಜಿಲ್ಲೆಯ ಜನರಿಗೆ ಗೊತ್ತಿದೆ. ಅವರು ತಮ್ಮ ನಿಲುವು ಬದಲಿಸಿಕೊಳ್ಳಬೇಕು. ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಹಿರಿಯರ ಬಗ್ಗೆ ಮಾತನಾಡುವಾಗ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರ ಕಪ್ಪು ಮಸಿ ಬಳಿಯುವುದಾಗಿ ಎಚ್ಚರಿಕೆ ನೀಡಿದರು. ರೈತಪರ ಪ್ರವೀಣ್ ಗೌಡ ಮಾತನಾಡಿ, ದೇವರಾಜೇಗೌಡ ಮಾನಸಿಕ ಅಸ್ವಸ್ಥನಂತೆ ಮಾತನಾಡುತ್ತಿದ್ದಾರೆ. ಅವರು ಸೂಕ್ತ ಚಿಕಿತ್ಸೆ ಪಡೆದರೆ ನಾವೇ ವೆಚ್ಚ ಭರಿಸುತ್ತೇವೆ ಎಂದು ಛೇಡಿಸಿದರು.

ಮುಖಂಡರಾದ ಅಲ್ವಿನ್, ನಯಾಜ್ ಇದ್ದರು.

# ದಲಿತರ ಭೂಮಿ ಕಬಳಿಕೆ ಆರೋಪ: ಪ್ರತಿಭಟನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ದಲಿತರಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿ ದೌರ್ಜನ್ಯವೆಸಗಲಾಗುತ್ತಿದೆ ಎಂದು ಆರೋಪಿಸಿ ದಲಿತ ಹಕ್ಕುಗಳ ಸಮಿತಿಯಿಂದ ತಾಲೂಕು ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಹಳ್ಳಿಮೈಸೂರು ಹೋಬಳಿ ಜೋಡಿಗುಬ್ಬಿ ಗ್ರಾಮದ ಕಾಳಯ್ಯ, ಚಿಕ್ಕಮ್ಮ, ಕೃಷ್ಣಪ್ಪ, ಉದ್ದೂರು ಗ್ರಾಮದ ಸಣ್ಣ ಮರಿಯಯ್ಯ, ರಾಮೇನಹಳ್ಳಿ ಗ್ರಾಮದ ವೆಂಕಟಯ್ಯ ಮತ್ತು ಜವರಯ್ಯ ಹಾಗೂ ಕೆರಗೋಡು ಗ್ರಾಮದ ಸಣ್ಣ ನಿಂಗಯ್ಯ ಎಲ್ಲರೂ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ್ದಾರೆ.

ಇವರಿಗೆ ಉಯ್ಯಗೌಡನಹಳ್ಳಿ ಸ.ನಂ.23, 24, 31, 32 ಇಲ್ಲಿ ಸರ್ಕಾರದಿಂದ ಮಂಜೂರಾದ ಜಮೀನಿದ್ದು, ಅದರಲ್ಲಿ ಉಳುಮೆ ಮಾಡಿಕೊಂಡು ಅನುಭವದಲ್ಲಿದ್ದು, ತಮ್ಮ ಜೀವನ ನಡೆಸುತ್ತಿದ್ದಾರೆ ಎಂದರು.

ಈ ಜಮೀನನ್ನು ಜೊಡಿಗುಬ್ಬಿ ಗ್ರಾಮದ ಒಕ್ಕಲಿಗ ಸಮುದಾಯಕ್ಕೆ ಸೇರಿದ ಸುರೇಶ, ಪ್ರಕಾಶ, ಶಿವಣ್ಣೇಗೌಡ, ಹರೀಶ್‌ಗೌಡ, ಗಂಗಮ್ಮ, ರಾಮೇಗೌಡ ಮತ್ತು ಶಿವೇಗೌಡ ಎಂಬುವರು ಅಪಾರ ಪ್ರಮಾಣದಲ್ಲಿ ಅಕ್ರಮವಾಗಿ ದಬ್ಬಾಳಿಕೆಯಿಂದ ಒತ್ತುವರಿ ಮಾಡಿದ್ದಾರೆ.

ದಲಿತರು ತಮ್ಮ ಜಮೀನು ಒತ್ತುವರಿಯಾಗಿದೆ, ಬಿಟ್ಟು ಕೊಡಿ ಎಂದು ಕೇಳಲು ಹೋದ ಸಂದರ್ಭದಲ್ಲಿ ದಲಿತರ ಮೇಲೆಯೇ ದೌರ್ಜನ್ಯ ನಡೆಸಲು ಮುಂದಾಗಿದ್ದಾರೆ ಎಂದು ದೂರಿದರು.

ಸುರೇಶ್ ಎಂಬುವರು ದಲಿತರ ಜಮೀನನ್ನು ಹೆಚ್ಚಿನ ಪ್ರಮಾಣದಲ್ಲಿ ಒತ್ತುವರಿ ಮಾಡಿ ತನ್ನ ಕುಟುಂಬದವರೊಂದಿಗೆ ಸಣ್ಣನಿಂಗಯ್ಯಗೆ ಸೇರಿದ ಜಮೀನಿನಲ್ಲಿ ದನಕರುಗಳಿಗೆ ನಿರ್ಮಿಸಿದ್ದ ಗುಡಿಸಲಿಗೆ ಬೆಂಕಿ ಹಾಕಿ ಅವರ ಜಮೀನನನ್ನು ಒತ್ತುವರಿ ಮಾಡಿ ಜೆಸಿಬಿಯಿಂದ ಕಾಲುವೆ ತೆಗೆದು, ಅಕ್ರಮವಾಗಿ ಶೆಡ್ ನಿರ್ಮಾಣ ಮಾಡಿ ಸಣ್ಣನಿಂಗಯ್ಯ ಅವರ ಮಗ ಪರಮೇಶ್ ಮೇಲೆ ಜಾತಿ ನಿಂದನೆ ಮಾಡಿ ದೌರ್ಜನ್ಯ ಎಸಗಿರುತ್ತಾರೆ ಎಂದರು.

ಪ್ರತಿಭಟನೆಯಲ್ಲಿ ತಾಲ್ಲೂಕು ಸಂಚಾಲಕ ರಾಜು ಸಿಗರನಹಳ್ಳಿ, ಸಿಐಟಿಯು ಮುಖಂಡ ಕುಮಾರಸ್ವಾಮಿ, ಜಿ.ಕೆ ಪರಮೇಶ್, ಕೃಷ್ಣಪ್ಪ, ಮರಿಯಯ್ಯ, ಕಾಳಯ್ಯ, ಸಣ್ಣನಿಂಗಯ್ಯ, ತಾಯಮ್ಮ, ಚಿಕ್ಕಮ್ಮ, ಕರಿಯಯ್ಯ, ವೆಂಕಟಯ್ಯ ಹಾಜರಿದ್ದರು.

# ವಿವಿಧ ಕಾಮಗಾರಿ: ಸಚಿವರಿಗೆ ಸಂಸದರಿಂದ ಮನವಿ ಸಲ್ಲಿಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಂಸತ್ ಅಧಿವೇಶನ ಹಿನ್ನೆಲೆಯಲ್ಲಿ ದೆಹಲಿ ಪ್ರವಾಸದಲ್ಲಿರುವ ಸಂಸದ ಶ್ರೇಯಸ್ ಪಟೇಲ್ ಅವರು ಮಂಗಳವಾರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ಸಂವಹನ ಸಚಿವ ಜ್ಯೋತಿರಾಧಿತ್ಯ ಸಿಂಧ್ಯಾ ಅವರನ್ನು ಭೇಟಿಯಾಗಿ ವಿವಿಧ ಅಭಿವೃದ್ಧಿ ಕಾಮಗಾರಿ ಕುರಿತು ಚರ್ಚಿಸಿದರು.

ಹಾಸನ ಅಂಚೆ ವಿಭಾಗದಲ್ಲಿ 17 ಖಾಲಿ ಜಾಗಗಳು ಲಭ್ಯವಿದ್ದರೂ ಅನೇಕ ಅಂಚೆ ಕಚೇರಿಗಳು ಇನ್ನೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ತಾಲ್ಲೂಕು ಕೇಂದ್ರವಾದ ಆಲೂರಿನಲ್ಲಿ ಅಂಚೆ ಕಚೇರಿ ಕಟ್ಟಡ ನಿರ್ಮಾಣ ಸೇರಿದಂತೆ, ಹಾಸನ (ಎನ್.ಆರ್.ಬಡಾವಣೆ), ಹರಳಹಳ್ಳಿ, ಬಾಗೂರು, ಗೊರೂರು, ರಾಮನಾಥಪುರ, ನುಗ್ಗೇಹಳ್ಳಿ, ಶಾಂತಿಗ್ರಾಮ, ಕಂದಲಿ, ದುದ್ದ, ಯಸಳೂರು, ಬಿಕ್ಕೋಡು, ಪಾಳ್ಯ, ಹಾನುಬಾಳು, ಹಗರೆ ಹಾಗೂ ಕೆ.ಹೊಸಕೋಟೆಗಳಲ್ಲಿ ಸಬ್ ಪೋಸ್ಟ್ ಕಚೇರಿ ಕಟ್ಟಡಗಳಿಗೆ ಅನುಮೋದನೆ ನೀಡುವಂತೆ ಸಚಿವ ಜೋತಿರಾಧಿತ್ಯ ಸಿಂಧ್ಯ ಅವರಿಗೆ ಕೋರಿದರು. ಇದೇ ವೇಳೆ ಜಿಲ್ಲೆಯ ಮಲೆನಾಡು ಭಾಗದಲ್ಲಿ ಹೆಚ್ಚುತ್ತಿರುವ ಮಾನವ-ಕಾಡಾನೆ ಸಂಘರ್ಷವನ್ನು ಗಮನದಲ್ಲಿಟ್ಟುಕೊಂಡು, ಸಾರ್ವಜನಿಕರ ಸುರಕ್ಷತೆಗೆ ಅಗತ್ಯವಾದ ಮೊಬೈಲ್ ನೆಟ್ವರ್ಕ್ ವ್ಯವಸ್ಥೆ ಕಲ್ಪಿಸುವಂತೆ ಪ್ರಸ್ತಾವನೆ ಸಲ್ಲಿಸಿದರು.

ಸಾರ್ವಜನಿಕ ಸುರಕ್ಷತೆ ಮತ್ತು ಪರಿಣಾಮಕಾರಿ ಆಡಳಿತದ ದೃಷ್ಟಿಯಿಂದ 4 ಸ್ಯಾಚುರೇಷನ್ ಯೋಜನೆಯಡಿ ಮೊಬೈಲ್ ದೂರಸಂಪರ್ಕ ಮೂಲಸೌಕರ್ಯ ಒದಗಿಸುವಂತೆ ಒತ್ತಾಯಿಸಿದ್ದು, ಬೇಲೂರು ತಾಲ್ಲೂಕಿನ ದೊಡ್ಡಸಾಲಾವರ, ಹೊಳಲು, ಬ್ಯಾದನೆ, ಕನಹಳ್ಳಿ, ನೇರ್ಲಮಕ್ಕಿ, ಅಂಕಿಹಳ್ಳಿ, ಸಕಲೇಶಪುರ ತಾಲ್ಲೂಕಿನ ಈಚಲಬೀಡು, ಹಿರಿದನಹಳ್ಳಿ ಹಾಗೂ ಆಲೂರು ತಾಲ್ಲೂಕಿನ ಮಾದಿಹಳ್ಳಿ ಮತ್ತು ಹರಿಹಳ್ಳಿಯಲ್ಲಿ ಮೊಬೈಲ್ ಟವರ್ ಅಳವಡಿಸುವಂತೆ ಮನವಿ ಮಾಡಿದೆ.

**ಗಜರಾಜ್ ಸಿಸ್ಟಮ್‌ಗೆ ಮನವಿ**

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ ಹೊಳೆನರಸೀಪುರ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ಒಂದು ಲೈನ್, ಪ್ಲಾಟ್ ಫಾರ್ಮ್ ವಿಸ್ತರಿಸಲು ಹಾಗೂ ಗಜರಾಜ್ ಸಿಸ್ಟಮ್ ಅಳವಡಿಸುವಂತೆ ಪ್ರಸ್ತಾವನೆ ಸಲ್ಲಿಸಿದರು.

ಹೊಳೆನರಸೀಪುರದಲ್ಲಿ ಪ್ರಸ್ತುತ ಕೇವಲ ಎರಡು ರೈಲು ಹಳಿಗಳು ಮಾತ್ರ ಇದ್ದು, ಸಂಚಾರ ದಟ್ಟಣೆ ಹಾಗೂ ಪ್ರಯಾಣಿಕರಿಗೆ ಸಮಸ್ಯೆಯಾಗುತ್ತಿದೆ. ಪ್ಲಾಟ್‌ಫಾರ್ಮ್ ವಿಸ್ತರಣೆ ಮತ್ತು ಸಂಬಂಧಿತ ಕಾಮಗಾರಿಗಳಿಗೆ ಅಗತ್ಯ ಭೂಮಿಯನ್ನು ರಾಜ್ಯ ಸರ್ಕಾರ ಪಿಡಬ್ಲ್ಯುಡಿ ಮೂಲಕ ರೈಲ್ವೆಗೆ ಹಸ್ತಾಂತರಿಸಲು ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ, ಕನಿಷ್ಠ ಒಂದು ಹೆಚ್ಚುವರಿ ರೈಲು ಹಳಿ ನಿರ್ಮಾಣ ಹಾಗೂ ಪ್ಲಾಟ್‌ಫಾರ್ಮ್ ವಿಸ್ತರಣೆಗೆ ಅನುಮೋದನೆ ನೀಡುವಂತೆ



ಮನವಿ ಮಾಡಿದರು.

ಜೊತೆಗೆ ಮಲೆನಾಡು ಭಾಗದಲ್ಲಿ ರೈಲು ಡಿಕ್ಕಿಯಿಂದ ಆನೆಗಳ ಸಾವು ಸಂಭವಿಸುತ್ತಿರುವ ಗಂಭೀರ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಅಪಾಯಕಾರಿ ರೈಲು ಮಾರ್ಗಗಳಲ್ಲಿ ಆಗಜರಾಜ್ ಸಿಸ್ಟಮ್‌ಟಿ (ತಂತ್ರಜ್ಞಾನ ಆಧಾರಿತ ಆನೆ ಪತ್ತೆ ಮತ್ತು ಎಚ್ಚರಿಕೆ ವ್ಯವಸ್ಥೆ) ಅಳವಡಿಸಬೇಕು. ಹಾಸನ ಜಿಲ್ಲೆ ಪಶ್ಚಿಮ ಘಟ್ಟಗಳ ಪ್ರದೇಶವಾಗಿದ್ದು, ಇಲ್ಲಿ ಆನೆಗಳ ಸಹಜ ಸಂಚಾರ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ವನ್ಯಜೀವಿಗಳ ರಕ್ಷಣೆ ಮಾಡುವುದು ಅತ್ಯಗತ್ಯವಾಗಿದೆ. ತಂತ್ರಜ್ಞಾನ ಆಧಾರಿತ ವ್ಯವಸ್ಥೆ ಆನೆಗಳ ರಕ್ಷಣೆ ಹಾಗೂ ಸುರಕ್ಷಿತ ರೈಲು ಸಂಚಾರಕ್ಕೆ ಸಹಕಾರಿ ಆಗಲಿದೆ ಎಂದು ಸಂಸದರು ಸಚಿವರು ಗಮನ ಸೆಳೆದಿದ್ದಾರೆ.

# ಸಡಗರದ ಕೋಟೆ ಮಾರಮ್ಮ ಬ್ರಹ್ಮ ರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ನುಗ್ಗೇಹಳ್ಳಿ: ಹೋಬಳಿಯ ಜಂಬೂರು ಗ್ರಾಮದ ಶ್ರೀ ಕೋಟೆ ಮಾರಮ್ಮ ಬ್ರಹ್ಮ ರಥೋತ್ಸವ ಸೋಮವಾರ ರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಜಾತ್ರಾ ಮಹೋತ್ಸವ ಹಾಗು ರಥೋತ್ಸವ ಅಂಗವಾಗಿ ಭಾನುವಾರ ಮತ್ತು ಸೋಮವಾರ ದೇವಾಲಯದಲ್ಲಿ ಶ್ರೀ ಕೋಟೆ ಮಾರಮ್ಮ ದೇವಿಗೆ ಬೆಳಿಗ್ಗೆಯಿಂದಲೇ ಅಭಿಷೇಕ, ಹೂವಿನ ಅಲಂಕಾರ ಸೇರಿ ವಿಶೇಷ ಪೂಜೆ ನೆರವೇರಿತು. ಮಹಿಳೆಯರು ತಂಬಿಟ್ಟಿನ ಆರತಿಯೊಂದಿಗೆ ಉತ್ಸವದಲ್ಲಿ ಭಾಗಿಯಾದರು.

ಸುತ್ತಲಿನ ಮಂಚೇನಹಳ್ಳಿ, ತೆಂಕನಹಳ್ಳಿ, ಹುಲಿಕೆರೆ, ಅತ್ತಿಹಳ್ಳಿ, ಹೊನ್ನಮಾರನಹಳ್ಳಿ, ಅವೇರಹಳ್ಳಿ, ಮುದ್ದನಹಳ್ಳಿ, ಒಂಟಿ ಮಾವಿನಹಳ್ಳಿ ಸೇರಿ ರಾಜ್ಯದ ನಾನಾ ಭಾಗದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡರು.

# ನನ್ನ ವಿರುದ್ಧ ಮಾತನಾಡುವವರು ಶತಮೂರ್ಖರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಷ್ಟ್ರೀಯ ಪಕ್ಷವಾದ ಬಿಜೆಪಿ ಹೆಸರು ಹೇಳಲು ಯೋಗ್ಯತೆ ಇರಬೇಕು, ನನ್ನ ವಿರುದ್ಧ ಮಾತನಾಡಿರುವವರೆಲ್ಲ ದೊಡ್ಡ ಕಳ್ಳರೆಂದು ವಕೀಲ ದೇವರಾಜೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಂಬಿಹಳ್ಳಿ ಗಿರೀಶ್ ಎಂಬಾತ ರೌಡಿ ಶೀಟರ್, ನಾರಾಯಣಗೌಡ ಎಂಬಾತ ನನ್ನ ದುಡ್ಡಲ್ಲಿ ಎಣ್ಣೆ ಕುಡಿದುಸೋಲಿಗೆ ಶ್ರಮಿಸಿದ. ಮೋಹನ್ ಕುಮಾರ್ ಎಂಬಾತ ನನ್ನ ಕಾರಿನಲ್ಲಿ ಓಡಾಡಿ ಮಜಾ ಮಾಡಿದ ಹೊರತು ಮತ ಕೊಡಿಸಲಿಲ್ಲ. ಸ್ವಪಕ್ಷದ ಅಭ್ಯರ್ಥಿ ಸೋಲಿಗೆ ಹೋರಾಡಿದ ಇವರೆಲ್ಲ ಶತಮೂರ್ಖರಲ್ಲದೇ ಮತ್ತೇನು ಎಂದು ಪ್ರಶ್ನಿಸಿದರು.

ಲೋಕಸಭೆ ಚುನಾವಣೆಯಲ್ಲಿ ಶ್ರೇಯಸ್ ಪಟೇಲ್ ಗೆಲ್ಲಿಸಬೇಕೆಂದು ಬಹಿರಂಗವಾಗಿ ಹೇಳಿದ ಮಾಜಿ ಶಾಸಕ ಪ್ರೀತಂ ಗೌಡ ವಿರುದ್ಧ ಹೈಕಮಾಂಡ್ ಶಿಸ್ತು ಕ್ರಮ ಜರುಗಿಸಲಿಲ್ಲ. ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದವರು ಎಲ್ಲಾ ಕಡೆ ಸುತ್ತಾಡಿ



ಪಕ್ಷ ಸಂಘಟನೆ ಮಾಡಬೇಕು. ಹವಾ ನಿಯಂತ್ರಿತ ಕಾರಿನಲ್ಲಿ ಓಡಾಡಿದರೆ ಯಾವ ಪ್ರಯೋಜನವಿಲ್ಲ. ಜೆಡಿಎಸ್‌ನ ನಿಖಿಲ್ ಕುಮಾರ್ ಅವರು ಹೇಗೆ ಪಕ್ಷ ಸಂಘಟನೆ ಮಾಡುತ್ತಿದ್ದಾರೆಂಬುದನ್ನು ನೋಡಿ ಕಲಿಯಿರಿ ಎಂದು ಛೇಡಿಸಿದರು.

ಪ್ರೀತಂ ಗೌಡರ ವಿರುದ್ಧ ಕಾನೂನು ಹೋರಾಟ ಮುಂದುವರಿಸಿದ್ದೇನೆ. ಸ್ವತಃ ಪ್ರಧಾನಿ ನರೇಂದ್ರ ಮೋದಿಯವರೇ ಬಂದು ಸುಮ್ಮನಿರುವಂತೆ ಹೇಳಿದರೂ ಹಿಂದೆ ಸರಿಯುವುದಿಲ್ಲ. ಕಾಂಗ್ರೆಸ್ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಜಿಲ್ಲೆಯಲ್ಲಿ ಪಕ್ಷ ಮುಳುಗಿಸಲು ಹೊರಟಿರುವ ಅವರ ಪ್ರಯತ್ನ ಸಫಲವಾಗಲು ಬಿಡುವುದಿಲ್ಲವೆಂದು ಶಪಥ ಮಾಡಿದರು.

ಒಂದು ಬಾರಿ ಹಾಸನ ನಗರಸಭೆ ಸದಸ್ಯರಾಗಿ ನಗರ ಹೃದಯ ಭಾಗದಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಜಾಗ ಕೊಳ್ಳೆ ಹೊಡೆದಿರುವ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಹೆಚ್.ಕೆ.ಮಹೇಶ್ ಅವರ ಬಂಡವಾಳವನ್ನೂ ಬಯಲಿಗೆಳಯುತ್ತೇನೆಂದು ಹೇಳಿದರು.

ನನ್ನನ್ನು ತೃತೀಯ ದರ್ಜೆ ಪ್ರಜೆ ಎಂದಿರುವ ನೀವು ಯಾವ ದರ್ಜೆಯ ನಾಗರಿಕ ಎಂಬುದನ್ನು ಜನರ ಬಾಯಿಂದಲೇ ಹೇಳಿಸುತ್ತೇನೆ. ನಿಮ್ಮ ಅವ್ಯವಹಾರದ ಎಲ್ಲಾ ದಾಖಲೆಗಳನ್ನು ಬಹಿರಂಗಪಡಿಸುತ್ತೇನೆ. ನಾನು ಕಾಂಗ್ರೆಸ್‌ಗೆ ನಿಮಗಿಂತ ಹಿರಿಯ. ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ವರ್ಷಕ್ಕೆ ಹತ್ತು ಬಾರಿ ಭೇಟಿ ಮಾಡಿದ್ದೇನೆ. ನಿಮ್ಮ ಸಂಪೂರ್ಣ ಜಾತಕ ನನ್ನ ಬಳಿ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ದೇವರಾಜೇಗೌಡ ಮಾನಸಿಕ ಅಸ್ವಸ್ಥ: ಬಿಜೆಪಿ ವ್ಯಂಗ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಪರಾಜಿತ ಬಿಜೆಪಿ ಅಭ್ಯರ್ಥಿ, ವಕೀಲ ದೇವರಾಜೇಗೌಡ ಮಾಜಿ ಶಾಸಕ ಪ್ರೀತಮ್ ಜೆ. ಗೌಡರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದು, ಇದೇ ವರ್ತನೆ ಮುಂದುವರಿಸಿದರೆ ಅವರ ಬಂಡವಾಳ ಬಿಚ್ಚಿಡಬೇಕಾಗುತ್ತದೆಂದು ಬಿಜೆಪಿ ಪದಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಂಬಿಹಳ್ಳಿ ಗಿರೀಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇವರಾಜೇಗೌಡ ಬಿಜೆಪಿ ಕಾರ್ಯಕರ್ತನೇ ಅಲ್ಲ. 2023ರ ಚುನಾವಣೆಯಲ್ಲಿ ಬಿ ಫಾರಂ ಕೊಟ್ಟಿದ್ದು ಬಿಟ್ಟರೆ ಆತನಿಗೂ ಪಕ್ಷಕ್ಕೂ ಸಂಬಂಧವಿಲ್ಲ. ಯಾವ ಸಭೆ, ಪ್ರತಿಭಟನೆಗಳಿಗೆ ಬರುವುದಿಲ್ಲ. ಎಲ್ಲರ ಕುರಿತು ಬಾಯಿಗೆ ಬಂದಂತೆ ಮಾತನಾಡುತ್ತಾ ಮಾನಸಿಕ ಅಸ್ವಸ್ಥರಂತೆ



ವರ್ತಿಸುತ್ತಿದ್ದಾನೆ. ಆತ ಒಳ್ಳೆಯ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯದಿದ್ದರೆ ಹುಚ್ಚನಾಗುತ್ತಾನೆ. ಯಾರ್ಯಾರ ಬಳಿ ವಸೂಲಿ ಮಾಡಿದ್ದಾನೆಂಬ ಸಂಪೂರ್ಣ ಮಾಹಿತಿ ನಮಗಿದೆ. ಕೊಚ್ಚೆ ಮೇಲೆ ಕಲ್ಲೆಸೆದರೆ ಬಟ್ಟೆ ಕೊಳಲಾಗುತ್ತದೆಂದು ಸುಮ್ಮನಿದ್ದೆವು. ಆದರೆ, ದೇವರಾಜೇಗೌಡ ನಮ್ಮ ಮೌನವನ್ನು ಅಸಹಾಯಕತೆಯೆಂದು ತಿಳಿದು ಇದೇ ಧೋರಣೆ ಮುಂದುವರಿಸಿದರೆ ಸುಮ್ಮನಿರುವುದಿಲ್ಲವೆಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

# ಫೆ.28ಕ್ಕೆ ರಾಜ್ಯ ಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೆಂಗಳೂರಿನ ಅರಮನೆ ಮೈದಾನದಲ್ಲಿ ಫೆ. 28ರ ಶನಿವಾರ ರಾಜ್ಯ ಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ ಹಾಗೂ ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಚೈತ್ರಾ ನಾಯಕರಹಳ್ಳಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಪ್ರಾಥಮಿಕ ಶಾಲಾ ಶಿಕ್ಷಕರ ಹಲವು ಬೇಡಿಕೆಗಳನ್ನು ಈಡೇರಿಸಿರುವ ಹಿನ್ನೆಲೆ ಧನ್ಯತಾ ಸಮಾರಂಭ ಏರ್ಪಡಿಸಲಾಗಿದೆ. ಜೊತೆಗೆ ಶಿಕ್ಷಕರ ವಿವಿಧ ಸಮಸ್ಯೆ ಪರಿಹಾರಕ್ಕಾಗಿ ಇದೇ ಸಂದರ್ಭದಲ್ಲಿ ಹಕ್ಕೊತ್ತಾಯ ಮಂಡಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ




ಡಿ.ಕೆ.ಶಿವಕುಮಾರ್, ಶಿಕ್ಷಣ ಸಚಿವ ಮಧು ಬಂಗಾರಪ್ಪ ಸೇರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಭಾಗವಹಿಸುವುದರಿಂದ ನಮ್ಮ ಬೇಡಿಕೆಗಳನ್ನು ಸಲ್ಲಿಸಲಾಗುವುದು ಎಂದರು.

ಮುಖ್ಯವಾಗಿ ಪ್ರಾಥಮಿಕ ಶಾಲಾ ಸಹ ಶಿಕ್ಷಕ ಹುದ್ದೆಯಿಂದ ಪ್ರೌಢ ಶಾಲಾ ಸಹ ಶಿಕ್ಷಕ ವೃಂದ ಗ್ರೇಡ್-1 ಹುದ್ದೆಗಳಿಗೆ ಬಡ್ತಿ ನೀಡಬೇಕು, ಪದವಿ ಹೊಂದಿದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆರ್ಥಿಕ ಸೌಲಭ್ಯ ಒದಗಿಸಬೇಕು. 50 ಮಕ್ಕಳಿರುವ ಶಾಲೆಗೆ ಮುಖ್ಯ ಶಿಕ್ಷಕ ಹಾಗು 150ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗೆ ಹಿರಿಯ ಮುಖ್ಯ ಶಿಕ್ಷಕರ ಹುದ್ದೆ ಮಂಜೂರು ಮಾಡಬೇಕು.

ನೂತನ ಪಿಂಚಣಿ ಯೋಜನೆ ರದ್ದುಮಾಡಿ ಹಳೆಯ ಪಿಂಚಣಿ ಜಾರಿಗೊಳಿಸಬೇಕು. ಬಿಎಲ್‌ಒ ಹಾಗು ಇತರ ಎಲ್ಲಾ ಬೋಧಕೇತರ ಕೆಲಸದಿಂದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಮುಕ್ತಗೊಳಿಸಬೇಕು ಸೇರಿ ನಾನಾ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದರು.

ಪಠ್ಯ ಬೋಧನೆಗಿಂತ ಶಾಲಾ ಶಿಕ್ಷಕರಿಗೆ ಹೆಚ್ಚಿನ ಕೆಲಸಗಳನ್ನು ನೀಡಲಾಗುತ್ತದೆ. ಮಕ್ಕಳಿಗೆ ಮೊಟ್ಟೆ ವಿತರಣೆ, ಶಾಲಾ ಆಸ್ತಿ ಸಂರಕ್ಷಣೆ, ಪಠ್ಯೇತರ ಚಟುವಟಿಕೆ, ಚುನಾವಣಾ ಕೆಲಸ ಹೀಗೆ ವ್ಯಾಪ್ತಿ ಮೀರಿ ಕೆಲಸ ನೀಡುತ್ತಿರುವುದರಿಂದ ಮಕ್ಕಳಿಗೆ ಸರಿಯಾಗಿ ಪಾಠ ಮಾಡಲು ಸಾಧ್ಯವಾಗುತ್ತಿಲ್ಲ. ಸುಖಾ ಸುಮ್ಮನೆ ಸರ್ಕಾರಿ ಶಿಕ್ಷಕರು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಆರೋಪ ಮಾಡುವ ಬದಲು ಕೆಲಸದ ಹೊರೆ ಕಡಿಮೆ ಮಾಡಿ ಪಠ್ಯ ಬೋಧನೆಗೆ ನಮ್ಮನ್ನು ಸೀಮಿತಗೊಳಿಸಬೇಕೆಂದು ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಗೌರವಾಧ್ಯಕ್ಷ ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿ ರವೀಂದ್ರ, ನಿಕಟಪೂರ್ವ ಕಾರ್ಯಾಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ ಇದ್ದರು.

# ಕಾರ್ಮಿಕ ಕಾನೂನು ಅಧಿಸೂಚನೆ ವಾಪಸ್‌ಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನಾಲ್ಕು ಕಾರ್ಮಿಕ ಕಾನೂನು ರದ್ದುಗೊಳಿಸಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಅಧಿಸೂಚನೆ ಹಿಂಪಡೆಯಬೇಕೆಂದು ಆಗ್ರಹಿಸಿ ಫೆ.12 ರಂದು ಪಟ್ಟಣದಲ್ಲಿ ಮೆರವಣಿಗೆ ಮತ್ತು ರಸ್ತೆ ತಡೆ ನಡೆಸಲಾಗುವುದೆಂದು ಸಿಐಟಿಯು ಜಿಲ್ಲಾ ಮುಖಂಡ ಹೆಚ್.ಎಸ್. ಮಂಜುನಾಥ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೈಗಾರಿಕಾ ಸಂಬಂಧಗಳ (ಕರ್ನಾಟಕ) ಕರಡು ನಿಯಮ ಪ್ರಕಟಿಸುವ ಮೂಲಕ ರಾಜ್ಯ ಸರ್ಕಾರ ಕಾರ್ಮಿಕರಿಗೆ ದ್ರೋಹ ಬಗೆದಿದೆ. ಕಾರ್ಮಿಕ ವಿರೋಧಿಯಾಗಿರುವ ಈ ಕರಡು ನಿಯಮಗಳನ್ನು ಕೂಡಲೇ ಹಿಂಪಡೆಯಬೇಕು. ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಜಾರಿಗೊಳಿಸಿರುವ




ಭೂ ಸುಧಾರಣಾ, ಎಪಿಎಂಸಿ, ಜಾನುವಾರು ಸಂರಕ್ಷಣಾ ತಿದ್ದುಪಡಿ ಕಾಯ್ದೆ ರದ್ದುಪಡಿಸಬೇಕೆಂದು ಒತ್ತಾಯಿಸಿದರು.

ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಸಂಯುಕ್ತ ಹೋರಾಟ-ಕರ್ನಾಟಕ ಕರೆಯ ಮೇರೆಗೆ ಉತ್ಪಾದನೆ, ಸೇವೆ, ಸ್ಥಗಿತಗೊಳಿಸಿ ಮುಷ್ಕರದಲ್ಲಿ ಅಂಗನವಾಡಿ ನೌಕರರ ಸಂಘ, ಕರ್ನಾಟಕ ಗ್ರಾಮ ಪಂಚಾಯತ್ ನೌಕರರ ಸಂಘ, ಅಕ್ಷರ ದಾಸೋಹ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯ ರೈತ ಸಂಘ, ದಲಿತ ಸಂಘಟನೆ ಬೀದಿ ಬದಿ ವ್ಯಾಪಾರಿಗಳ ಸಂಘ, ಕನ್ನಡಪರ ಸಂಘಗಳು ಹಾಗು ಪ್ರಗತಿಪರ ಸಂಘಟನೆಗಳು ಪಾಲ್ಗೊಳ್ಳಲಿವೆಯೆಂದು ತಿಳಿಸಿದರು.

ಕೇಂದ್ರ ಸರ್ಕಾರದ ಪರಮಾಣು ಶಕ್ತಿಯ ಸುಸ್ಥಿರ ಬಳಕೆ ಮತ್ತು ಪ್ರಗತಿ ಕಾಯ್ದೆ, ವಿಮಾ ಕ್ಷೇತ್ರದಲ್ಲಿ ಶೇ. 100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆ, ಅಗತ್ಯ ವಸ್ತುಗಳ ಬೆಲೆ ಏರಿಕೆ, ವಿದ್ಯುತ್ ತಿದ್ದುಪಡಿ ಕಾಯ್ದೆ, ಬೀಜ ಮಸೂದೆ, ಅರಾವಳಿ ಬೆಟ್ಟಗಳ ನಾಶದಂತಹ ಆದೇಶ ವಿರೋಧಿಸಿ ರಸ್ತೆ ತಡೆ ನಡೆಸಿ ಪ್ರತಿರೋಧ ವ್ಯಕ್ತಪಡಿಸುವುದಾಗಿ ತಿಳಿಸಿದರು.

29 ಕಾರ್ಮಿಕ ಕಾಯ್ದೆಗಳಿಗೆ ತಿಲಾಂಜಲಿ ನೀಡಿ ಎರಡು ತಿಂಗಳ ಹಿಂದೆಯೇ ಕೇಂದ್ರ ಸರ್ಕಾರ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ತಂದಿರುವುದರಿಂದ ಕಾರ್ಮಿಕರ ಬದುಕಿಗೆ ಹೊಡೆತ ಬೀಳಲಿದೆ. ರಾಜ್ಯ ಸರ್ಕಾರವು ಕಾರ್ಮಿಕ ವಿರೋಧಿ ಸಂಹಿತೆಗಳಿಗೆ ನಿಯಮ ರೂಪಿಸಬಾರದು. ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕನಿಷ್ಟ ವೇತನ ಪರಿಷ್ಕರಣೆ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರಘು, ಸಿ.ಆರ್.ನಾಗರತ್ನ, ತೇಜಸ್ ಗೌಡ, ಮಂಜೇಗೌಡ, ಎಂ.ಎಸ್.ಲೋಕೇಶ್, ನಾಗರತ್ನಮ್ಮ, ಜಾವಿದ್ ಪಾಷಾ, ಚಂದ್ರು ಇತರರಿದ್ದರು.

# ಶ್ರವಣಬೆಳಗೊಳ ಸೆಸ್ಕ್ ಕಚೇರಿ ದಾಖಲೆ ಕೊಠಡಿಗೆ ಭೂಮಿಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಶ್ರವಣಬೆಳಗೊಳದ ಸೆಸ್ಕ್ ಕಚೇರಿ ಆವರಣದಲ್ಲಿ 31 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ದಾಖಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎನ್.ಬಾಲಕೃಷ್ಣ ಭೂಮಿಪೂಜೆ ನೆರವೇರಿಸಿದರು.

ಬಳಿಕ ಅವರು ಮಾತನಾಡಿ, ಚನ್ನರಾಯಪಟ್ಟಣ ಹಾಗು ಶ್ರವಣಬೆಳಗೊಳಕ್ಕೆ ವಿದ್ಯುತ್ ಕೇಬಲ್ ಅಳವಡಿಕೆ ಮಾಡಲು ಅನುಮೋದನೆಯಾಗಿದ್ದು, ಶೀಘ್ರದಲ್ಲಿ ಶ್ರವಣಬೆಳಗೊಳಕ್ಕೆ ಆದ್ಯತೆ ನೀಡಿ ಕಾಮಗಾರಿ ಪೂರ್ಣಗೊಳಿಸ ಲಾಗುವುದು. ರೈತರಿಗೆ ಬೇಸಿಗೆ ಕಾಲದಲ್ಲಿ ವಿದ್ಯುತ್ ವ್ಯತ್ಯಯ ಹಾಗು ಇನ್ನಿತರ ತೊಂದರೆಯಾಗದಂತೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಶ್ರವಣಬೆಳಗೊಳ ಪಟ್ಟಣ ಸೇರಿ ಹೋಬಳಿಯ ಕೆಲವು ಗ್ರಾಮಗಳಿಗೆ ಮುಂದಿನ ದಿನಗಳಲ್ಲಿ ನಿರಂತರ ಜ್ಯೋತಿ ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು. ಶ್ರವಣಬೆಳಗೊಳ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಎಸ್.ಎಂ.ಲಕ್ಷ್ಮಣ್, ಎಸ್.ಆರ್.ಲೋಕೇಶ್, ಸದಸ್ಯ ಕೃಷ್ಣಮೂರ್ತಿ, ಕಾಂತರಾಜಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಹೇಂದ್ರ, ಮಹೇಶ್ ಬಾಬು, ಗುತ್ತಿಗೆದಾರ ಮಂಜೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರ ಚಲುವರಾಜ್, ಸಹಾಯಕ ಅಭಿಯಂತರ ಚಂದ್ರಶೇಖರ್, ಸೆಸ್ಕ್ ಸಿಬ್ಬಂದಿ ಹರ್ಷ, ಯಲ್ಲಪ್ಪ, ಪ್ರವೀಣ್, ಸುಮಿತ್ರಾ, ಶಿವಲಿಂಗಪ್ಪ ಮುಂತಾದವರಿದ್ದರು.

# ಕೇಂದ್ರ ಅರಣ್ಯ ಸಚಿವರ ಭೇಟಿಯಾದ ಕೆಜಿಎಫ್ ನಿಯೋಗ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನವದೆಹಲಿ: ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಹಳಸೆ ಶಿವಣ್ಣ ಅವರ ನೇತೃತ್ವದ ಕರ್ನಾಟಕ ಬೆಳೆಗಾರರ ಒಕ್ಕೂಟದ ನಿಯೋಗವು ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿಯಾಗಿ ಚರ್ಚಿಸಿತು.

ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಭಾಗಗಳಲ್ಲಿ ಹೆಚ್ಚಿರುವ ಕಾಡಾನೆ-ಮಾನವ ಸಂಘರ್ಷ ಕುರಿತು ನಿಯೋಗ ಸದಸ್ಯರು ಸಚಿವರ ಗಮನಕ್ಕೆ ತಂದರು. ಸಚಿವ ಭೂಪೇಂದ್ರ ಯಾದವ್ ಅವರು ಮಾತನಾಡಿ, ಗಂಭೀರ ಸಮಸ್ಯೆ ನಿವಾರಣೆಗಾಗಿ ಕೇಂದ್ರ ಸರ್ಕಾರ ಎಲ್ಲಾ ರೀತಿಯ ಸಹಕಾರ ನೀಡುತ್ತದೆ. ಅದಕ್ಕೆ ಅಗತ್ಯ ನಿಧಿಯನ್ನು ಮೀಸಲಿಡಲಾಗಿದೆ. ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಹೆಚ್ಚುವರಿ ಮಹಾನಿರ್ದೇಶಕ ರಮೇಶ್ ಕೆ. ಪಾಂಡೆ ಅವರು ಶೀಘ್ರ ಕಾಡಾನೆ ಹಾವಳಿ ಪೀಡಿತ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ ಎಂದರು.



ನಂತರ ನಿಯೋಗವು ರಮೇಶ್ ಕೆ.ಪಾಂಡೆ ಅವರನ್ನು ಭೇಟಿ ಮಾಡಲಾಯಿತು. ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯು ಈಗಾಗಲೇ ಭಾರತದ ಸುಮಾರು 8 ರಾಜ್ಯಗಳಲ್ಲಿ ವ್ಯಾಪಿಸಿರುವ ಮಾನವ-ಆನೆ ಸಂಘರ್ಷದ ಕುರಿತು ಮಾಹಿತಿ ಹೊಂದಿರುವುದಾಗಿಯೂ ಈ ಸಮಸ್ಯೆಗೆ ಆದಷ್ಟು ಶೀಘ್ರವಾಗಿ ಪರಿಹಾರ ಕಂಡುಕೊಳ್ಳಲು ಸಮಗ್ರವಾದ ಕ್ರಿಯಾ ಯೋಜನೆ ಸಿದ್ಧವಿರುವುದಾಗಿ ತಿಳಿಸಿದರು.

ನಿಯೋಗವು ಕೇಂದ್ರದ ಅರಣ್ಯ ಮತ್ತು ಪರಿಸರ ಸಚಿವಾಲಯದ ಜೊತೆ ನಿಕಟ ಸಂಪರ್ಕದಲ್ಲಿರುವಂತೆಯೂ ಮತ್ತು ರಾಜ್ಯ ಸರ್ಕಾರಕ್ಕೆ ಈ ಯೋಜನೆ ಜಾರಿಗೊಳಿಸಲು ಇಲಖಕಲ ನಿಧಿಯಿಂದ ಹಣ ಒದಗಿಸಲು 16ನೇ ಯೋಜನೆಯಲ್ಲಿ ತೀರ್ಮಾನಕ್ಕೆ ಬರಲಾಗಿದೆ ಎಂದರು. ಕರ್ನಾಟಕ ಬೆಳೆಗಾರರ ಒಕ್ಕೂಟದಿಂದ ಸಿದ್ಧಪಡಿಸಲಾದ ಮಾನವ-ಆನೆ ಸಂಘರ್ಷದ ಕುರಿತಾದ ಸಂಕ್ಷಿಪ್ತ ಸಾರಾಂಶದ ವರದಿಯ ಪ್ರತಿಯನ್ನು ಸಚಿವರು ಹಾಗೂ ಸರ್ಕಾರದ ಹೆಚ್ಚುವರಿ ಮಹಾನಿರ್ದೇಶಕರಿಗೆ ನೀಡಲಾಯಿತು.

ಮೇ ತಿಂಗಳ ಮೂರನೇ ವಾರದಲ್ಲಿ ರಾಜ್ಯ ಸರ್ಕಾರ, ಬೆಳೆಗಾರರ ಒಕ್ಕೂಟ ಹಾಗೂ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ನಡುವೆ ಸಮನ್ವಯ ಸಭೆ ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಿರುವುದಾಗಿಯೂ ಮಾಹಿತಿ ನೀಡಿದ್ದಾರೆ.

ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಹಳಸೆ ಶಿವಣ್ಣ, ಉಪಾಧ್ಯಕ್ಷ ಕೆ.ಕೆ.ವಿಶ್ವನಾಥ್, ಚಿಕ್ಕಮಗಳೂರು ಜಿಲ್ಲಾ ಬೆಳೆಗಾರರ ಸಂಘದ ಅಧ್ಯಕ್ಷ ಕೆ.ಯು.ರತೀಶ್, ಮೂಡಿಗೆರೆ ತಾಲ್ಲೂಕು ಬೆಳೆಗಾರರ ಸಂಘದ ಕಾರ್ಯದರ್ಶಿ ಕೆ.ಡಿ.ಮನೋಹರ್, ಜಿಲ್ಲಾ ಪ್ಲಾಂಟರ್ಸ್ ಸಂಘದ ಖಜಾಂಚಿ ಎಂ.ಜೆ.ಸಚಿನ್ ಇತರರಿದ್ದರು.

## ರಾಷ್ಟ್ರಕವಿ ಕುವೆಂಪುರವರ ಸತ್ಯ ನುಡಿ!

ಸಂಸ್ಕೃತಿ ಎಂದರೆ ಮನುಷ್ಯನೊಳಗಿನ ಮಾನವೀಯತೆಯ ವಿಕಾಸ

ಕುವೆಂಪು ಅವರ ಈ ಚಿಂತನೆ ಸಂಸ್ಕೃತಿಯ ನಿಜವಾದ ಅರ್ಥವನ್ನು ಸ್ಪಷ್ಟವಾಗಿ ಸಾರುತ್ತದೆ. ಸಂಸ್ಕೃತಿ ಎಂದರೆ ಕೇವಲ ಸಂಪ್ರದಾಯಗಳು, ಆಚರಣೆಗಳು ಅಥವಾ ಬಾಹ್ಯ ರೂಪಗಳಷ್ಟೇ ಅಲ್ಲ, ಅದು ಮನುಷ್ಯನ ಒಳಗಿನ ಗುಣಗಳ ಬೆಳವಣಿಗೆಯಾಗಿದೆ. ಪ್ರೀತಿ, ಕರುಣೆ, ಸಹಿಷ್ಣುತೆ, ಸತ್ಯ, ನ್ಯಾಯ ಮತ್ತು ಪರಸ್ಪರ ಗೌರವ ಇವೇ ಸಂಸ್ಕೃತಿಯ ನಿಜವಾದ ಆಧಾರಗಳು. ಇವು ಮನುಷ್ಯನ ನಡೆ-ನುಡಿ ಮತ್ತು ಜೀವನ ದೃಷ್ಟಿಕೋನದಲ್ಲಿ ಪ್ರತಿಬಿಂಬಿಸಿದಾಗ ಸಮಾಜ ಸೌಹಾರ್ದದಿಂದ ಬೆಳೆಯುತ್ತದೆ. ಮಾನವೀಯತೆಯ ವಿಕಾಸವೇ ಸಂಸ್ಕೃತಿಯ ಉನ್ನತ ರೂಪ ಎಂಬ ಸಂದೇಶವನ್ನು ಕುವೆಂಪು ಈ ನುಡಿಯ ಮೂಲಕ ಸಮಾಜಕ್ಕೆ ನೀಡುತ್ತಾರೆ. ಇದು ಎಲ್ಲಾ ಕಾಲಕ್ಕೂ ಅನ್ವಯಿಸುವ ಶಾಶ್ವತ ಸತ್ಯವಾಗಿದೆ.

**– ಅಂತೋಣಿ ಮುತ್ತು ವಿ. ಶಿಕ್ಷಕರು 7259675543**

## ಇತಿಹಾಸದಲ್ಲಿ ಈ ದಿನ

### ಫೆಬ್ರವರಿ-11

**1990:** ದಕ್ಷಿಣ ಆಫ್ರಿಕಾದ ನಾಯಕ ನೆಲ್ಸನ್ ಮಂಡೇಲಾ 27 ವರ್ಷಗಳ ಕಾರಾಗೃಹ ಶಿಕ್ಷೆಯ ಬಳಿಕ ಬಿಡುಗಡೆಗೊಂಡರು.

**1979:** ಇರಾನ್ ಕ್ರಾಂತಿ ಯಶಸ್ವಿಯಾಗಿ ಅಂತ್ಯಗೊಂಡು ಶಾಹ್ ಆಡಳಿತಕ್ಕೆ ತೆರೆ ಬಿತ್ತು.

**1929:** ಲ್ಯಾಟರನ್ ಒಪ್ಪಂದಕ್ಕೆ ಸಹಿ ಹಾಕಿ ವ್ಯಾಟಿಕನ್ ನಗರವನ್ನು ಸ್ವತಂತ್ರ ರಾಷ್ಟ್ರವಾಗಿ ಘೋಷಿಸಲಾಯಿತು.

**ಜನನ**

**1847:** ಥಾಮಸ್ ಆಲ್ವಾ ಎಡಿಸನ್, ಅಮೆರಿಕದ ಪ್ರಸಿದ್ಧ ವಿಜ್ಞಾನಿ ಮತ್ತು ಆವಿಷ್ಕಾರಕ

**1969:** ಜೆನ್ನಿಫರ್ ಅನಿಸ್ಟನ್, ಅಮೆರಿಕದ ಖ್ಯಾತ ನಟಿ

# ಹೊಳೆನರಸೀಪುರ ಸಾರ್ವಜನಿಕ ಆಸ್ಪತ್ರೆಗೆ ಮತ್ತಷ್ಟು ಸೌಕರ್ಯ: ಭರವಸೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಸವಲತ್ತು ನೀಡುವ ಮೂಲಕ ಸ್ಥಳೀಯವಾಗಿಯೇ ಇನ್ನೂ ಹೆಚ್ಚಿನ ಚಿಕಿತ್ಸೆಗೆ ಅನುಕೂಲವಾಗುವಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮಾಜಿ ಸಚಿವ ಹಾಗೂ ಶಾಸಕ ಹೆಚ್.ಡಿ.ರೇವಣ್ಣ ಹೇಳಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರೊಂದಿಗೆ ಸಭೆ ನಡೆಸಿದ ಅವರು, ರಾಜ್ಯದಲ್ಲೇ ಮೊದಲ ಬಾರಿಗೆ ಡಯಾಲಿಸಿಸ್ ಕೇಂದ್ರವನ್ನು ತಾಲೂಕು ಆಸ್ಪತ್ರೆಗೆ ತಂದಿದ್ದು ನಮ್ಮ ಹೆಗ್ಗಳಿಕೆ. ತಾಲೂಕಿನಲ್ಲಿ 4 ಸಮುದಾಯ ಆಸ್ಪತ್ರೆಗಳನ್ನು ತೆರೆದಿದ್ದು ಪ್ರಸ್ತುತ 350 ಹಾಸಿಗೆ ಸಾಮರ್ಥ್ಯ ಇರುವ ಪಟ್ಟಣದ ಆಸ್ಪತ್ರೆಯಲ್ಲಿ ಪ್ರತ್ಯೇಕ ಎರಡು ತೀವ್ರ ನಿಗಾ ಘಟಕ ಸ್ಥಾಪಿಸಲಾಗಿದೆ. 80 ಲಕ್ಷ ರೂ. ವೆಚ್ಚದಲ್ಲಿ ಲಿಫ್ಟ್, ತಾಯಿ ಮಕ್ಕಳ ಆಸ್ಪತ್ರೆ ಸೇರಿ ತಲಾ 20 ಲಕ್ಷ ರೂ. ವೆಚ್ಚಗೊಳಿಸಿ ಎರಡೂ ಕಡೆ ಶುದ್ಧ ಕುಡಿಯುವ ನೀರಿನ ಸ್ಥಾವರ ಸ್ಥಾಪಿಸಬೇಕಿದೆ. ಸಿಟಿ ಸ್ಕ್ಯಾನ್ ನಿರ್ವಹಣೆಗೆ ವರ್ಷವಾರು 27 ಲಕ್ಷ ರೂ. ವೆಚ್ಚಗೊಳಿಸಬೇಕಿದೆ. ಎಲ್ಲದಕ್ಕೂ ಮುಖ್ಯವಾಗಿ 65 ಲಕ್ಷ ರೂ. ವೆಚ್ಚದಲ್ಲಿ ಹೈಟೆಕ್ ಮತ್ತು ಅತ್ಯಾಧುನಿಕ ಯಂತ್ರೋಪಕರಣಗಳುಳ್ಳ ಪ್ರಯೋಗ ಶಾಲೆ ಪ್ರಾರಂಭಿಸಬೇಕು. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರ ಖರೀದಿಸಿ ಅಳವಡಿಸಬೇಕಿದೆ. ಬಿಸಿನೀರಿನ ಅನುಕೂಲತೆ ಹಾಗೂ ವಿದ್ಯುತ್‌ಲೈನ್ ಬದಲಾವಣೆಗೊಳಿಸಿ ಸಕಲ ಅನುಕೂಲತೆ ಮಾಡಬೇಕಿದೆ. ವೈದ್ಯರಿಗೆ ಅಗತ್ಯ ಸಲಕರಣೆ, ಯಂತ್ರಗಳ ಖರೀದಿಸಲು ಸಹ ಕೇಂದ್ರ ಸರ್ಕಾರದ ಸಿ ಆಡ್ ಆರ್‌ಎಫ್ ಅನುದಾನ ಕೋರಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಪತ್ರ ಬರೆಯುವುದಾಗಿ ತಿಳಿಸಿದರು.

ಈಗಾಗಲೇ ಪ್ರತಿ ತಾಲೂಕಿನ ಗ್ರಾಮೀಣ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 65 ಲಕ್ಷ ರೂ. ಅನುದಾನದಲ್ಲಿ ತಾಲೂಕಿನ ಪಡುವಲಹಿಪ್ಪೆ, ದೊಡ್ಡಹಳ್ಳಿ, ಬಿಟ್ಟಗೌಡನಹಳ್ಳಿ, ನಾಗಲಾಪುರ, ಚಿಚನಹಳ್ಳಿ, ಎಲೆಚಾಗಹಳ್ಳಿ, ದೊಡ್ಡಬ್ಯಾಗತವಳ್ಳಿ, ಬಾಗೀವಾಳು, ಮೂಡಲಹಿಪ್ಪೆ, ಚನ್ನರಾಯಪಟ್ಟಣ ತಾಲೂಕಿನ ಆನೆಕರೆ, ಅಲ್ಪೋನ್ ನಗರ, ಉದಯಪುರ, ಯಾಚೆನಹಳ್ಳಿ, ದೊಡ್ಡಕರಡೇವು, ನೊರನಕ್ಕಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಸಾರ್ವಜನಿಕರ ಸಂಖ್ಯೆ ಪಟ್ಟಣದ ಮತ್ತು ಗ್ರಾಮೀಣ ಭಾಗದ ಆಸ್ಪತ್ರೆಗಳಲ್ಲಿ ಹೆಚ್ಚಿರುವ ಇಂದಿನ ಆರೋಗ್ಯ ಪರಿಸ್ಥಿತಿಗೆ ತಕ್ಕಂತೆ ಮೇಲ್ದರ್ಜೆಗೆ ಏರಿಸಲಾಗುವುದು. ಅಗತ್ಯ ವೈದ್ಯರ ಕೊರತೆ ತುಂಬಲು ಹಂಗಾಮಿ ನೇಮಕಗೊಳಿಸಲು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಆಡಳಿತ ವೈದ್ಯಾಧಿಕಾರಿ ಡಾ.ಮಂಜುಳ, ಹಿರಿಯ ವೈದ್ಯರಾದ ಡಾ.ನಟರಾಜ್, ಡಾ.ಸೆಲ್ವಕುಮಾರ್ ಇತರರಿದ್ದರು.

# ಹಣಕ್ಕಾಗಿ ಕುಟುಂಬದ ಗೌರವಕ್ಕೆ ಧಕ್ಕೆ: ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರೀತಿಸಿ ಮದುವೆಯಾದ ಪತ್ನಿ, ಆಸ್ತಿ ದುರಾಸೆಗಾಗಿ ನನಗೆ ಮತ್ತು ನಮ್ಮ ಕುಟುಂಬ ಸದಸ್ಯರಿಗೆ ಕಿರುಕುಳ, ಮಾನಸಿಕ-ದೈಹಿಕ ಹಿಂಸೆ ನೀಡುತ್ತಿದ್ದಾರೆ ಎಂದು ಅರಕಲಗೂಡು ಪಟ್ಟಣದ ಕೋಟೆ ಬೀದಿ ನಿವಾಸಿ ಶಶಿಕುಮಾರ್ ಅಳಲು ತೋಡಿಕೊಂಡರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ತಾನು ಮಹಿಳೆ ಎಂಬ ಒಂದೇ ಕಾರಣಕ್ಕೆ, ಪತ್ನಿ ಅರ್ಪಿತಾ, ನನ್ನ ತಂದೆ-ತಾಯಿ, ಸಹೋದರಿಯರು ಹಾಗೂ ಪೊಲೀಸ್ ಇಲಾಖೆಯ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುಳ್ಳು ಹರಡಲು ಕಾರಣಳಾಗಿದ್ದಾಳೆ ಎಂದು ಆರೋಪಿಸಿದರು. ಆದರೆ ಅವೆಲ್ಲವೂ ಸುಳ್ಳು ಮತ್ತು ಆಧಾರ ರಹಿತ ಆರೋಪ. ಕೆಲ ದಿನಗಳಿಂದ ವಾಟ್ಸಪ್, ಫೇಸ್‌ಬುಕ್ ಹಾಗೂ ಯೂಟ್ಯೂಬ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹರಡುತ್ತಿದ್ದಾಳೆ. ಇದರಿಂದ ನಮ್ಮ ಕುಟುಂಬದ ಮಾನಹಾನಿ ಆಗುತ್ತಿದೆ ಎಂದು ಅಲವತ್ತುಕೊಂಡರು.

ನಾನು ಬೆಂಗಳೂರಿನಲ್ಲಿ ಕ್ಯಾಬ್ ಚಾಲಕನಾಗಿದ್ದು, ಅಲ್ಲಿ ಮನೆ ಸಹ ಮಾಡಿದ್ದೇನೆ. ಆದರೆ ಅಲ್ಲಿಗೆ ಪತ್ನಿ ಬರಲು ಒಪ್ಪುತ್ತಿಲ್ಲ.




ನನ್ನ ತಂದೆ ಗೋಪಾಲ್‌ಶೆಟ್ಟಿ ಕೆಎಸ್ ಆರ್‌ಟಿಸಿ ನಿವೃತ್ತ ನೌಕರರಾಗಿದ್ದು, ಕಷ್ಟಪಟ್ಟು ಮನೆ ಕಟ್ಟಿದ್ದಾರೆ. ಆ ಮನೆ ನನಗೇ ಬೇಕು ಎಂದು ಅರ್ಪಿತಾ ಕೊಡಬಾರದ ಕಾಟ ಕೊಡುತ್ತಿದ್ದಾಳೆ. ಅರ್ಪಿತಾ ಹಾಗೂ ನಮ್ಮ ಕುಟುಂಬದ ವ್ಯಾಜ್ಯ ಕೋರ್ಟ್‌ನಲ್ಲಿದೆ. ವಿಚಾರಣೆ ಇದ್ದಾಗಲೆಲ್ಲ ನ್ಯಾಯಾಧೀಶರು, ಪತ್ನಿಗೆ ಬುದ್ಧಿವಾದ ಹೇಳಿದ್ದಾರೆ. ಗಂಡನ ಜೊತೆ ಇರು ಎಂದು ಬುದ್ಧಿವಾದ ಹೇಳಿದ್ದಾರೆ. ಆಗ ಓಕೆ ಎಂದು ಒಪ್ಪಿಕೊಳ್ಳುವ ಪತ್ನಿ, ನಂತರ ನಾನು ಎಲ್ಲಿಗೂ ಬರುವುದಿಲ್ಲ. ಅರಕಲಗೂಡಿನಲ್ಲೇ ಇರಬೇಕು ಎಂದು ಪಟ್ಟು ಹಿಡಿಯುತ್ತಾಳೆ. ಇದಕ್ಕೆಲ್ಲ ಆಕೆಯ ತಂದೆ ತಾಯಿ ಕುಮ್ಮಕ್ಕು ಕಾರಣ ಎಂದು ದೂರಿದರು.

ನನಗೆ ಒಬ್ಬ ಮಗ ಇರುವುದರಿಂದ ನಾನು ಈಗಲೂ ನನ್ನ ಜೊತೆ ಬಾ, ನಿನ್ನ ಹಾಗೂ ಮಗನನ್ನು ಚೆನ್ನಾಗಿ ನೋಡಿಕೊಳ್ಳುವೆ ಎಂದು ಹೇಳಿದರೂ ಕೇಳುತ್ತಿಲ್ಲ. ಮನೆಯಲ್ಲಿ ಸಣ್ಣ ಸಣ್ಣ ವಿಚಾರಕ್ಕೂ ಗಲಾಟೆ ಮಾಡುವುದು, ವೃದ್ಧ ತಂದೆ-ತಾಯಿಗೆ ಊಟ-ತಿಂಡಿ ನೀಡದೆ ನಿರ್ಲಕ್ಷ್ಯ ತೋರುವುದು, ಯಾರಿಗೂ ತಿಳಿಸದೇ ಹೊರ ಹೋಗುವುದು, ಕೇಳಿದರೆ ಉಡಾಫೆ ಉತ್ತರ ನೀಡುವುದು, ಪದೇ ಪದೆ 112ಗೆ ಕರೆ ಮಾಡಿ ಪೊಲೀಸರನ್ನು ಕರೆಸುವುದು, ಮಾತೆತ್ತಿದರೆ ನಾನು ಹೆಣ್ಣು, ನಿಮ್ಮ ಇಡೀ ಕುಟುಂಬವನ್ನು ಜೈಲಿಗೆ ಕಳಿಸುತ್ತೇನೆ ಎಂದು ಧಮ್ಕಿ ಹಾಕುತ್ತಾಳೆ. ನನಗೆ ಎಸ್ಪಿ, ಮಹಿಳಾ ಸಂಘ, ಮಾಧ್ಯಮದವರು ಗೊತ್ತು ಎಂದು ಹೆದರಿಸುತ್ತಾಳೆ. ನಾನು ಬೇರೆ ಹೋಗುತ್ತೇನೆ 20 ಲಕ್ಷ ರೂ. ಕೊಡು ಎಂದು ಡಿಮ್ಯಾಂಡ್ ಮಾಡುತ್ತಾಳೆ. ನನಗೆ, ನನ್ನ ಕುಟುಂಬಕ್ಕೆ ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿದರು. ಗೋಪಾಲಶೆಟ್ಟಿ, ಭಾಗ್ಯಮ್ಮ, ಜ್ಯೋತಿ, ಶಾಂತಕುಮಾರಿ, ಲೋಕೇಶ್ ಇದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248